ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದಾದಿಯರ ಕೊರತೆ ಬಹಳಷ್ಟು ಕಂಡುಬರುತ್ತಿದೆ. ದಾದಿಯರ ನೇಮಕಾತಿ ಪ್ರಕ್ರಿಯೆ ಬಹಳಷ್ಟು ಮುಗಿದಿದೆ. ಆದಷ್ಟು ಬೇಗ ನಾನು ವ್ಯವಸ್ಥೆ ಮಾಡಿ ಕೊಡುತ್ತೇನೆ.

ಪಡಿತರ ಆಹಾರ ಪದಾರ್ಥಗಳ ಕಾಳಸಂತೆ ಮಾರಾಟ ಪ್ರಕರಣಗಳ ಬಗ್ಗೆ

51(453) ಶ್ರೀ ಸುಭಾಷ್ ಆರ್ ಗುತ್ತೇದಾರ್:(ಅಳಂದ) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಡಿತರ ಆಹಾರಧಾನ್ಯಗಳು ಕಾಳಸಂತೆಯಲ್ಲಿ ಮಾರಾಟ ಮಾಡುವಾಗ ಸಿಕ್ಕಿಬಿದ್ದ ಪ್ರಕರಣಗಳು ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಆ) ಇಂತಹ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳು, ಸಂಘ ಸಂಸ್ಥೆಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಇಂತಹ ಪ್ರಕರಣಗಳನ್ನು ತಡೆಯಲು ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ?

ಶ್ರೀ ಆರ್ ಅಶೋಕ್(ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ಸಾರ್ವಜನಿಕ ವಿತರಣೆ ಪದ್ಧತಿಯಡಿಯಲ್ಲಿನ ಪಡಿತರ ಪದಾರ್ಥಗಳ ಮಾರ್ಗ ಪಲ್ಲಟನೆ ಹಾಗೂ ಕಾಳಸಂತೆಯಲ್ಲಿನ ಮಾರಾಟಕ್ಕೆ ಸಂಬಂಧಪಟ್ಟಂತೆ 1187 ಪ್ರಕರಣಗಳನ್ನು ಪತ್ತೆ ಹೆಚ್ಚಲಾಗಿದ್ದು ಇವುಗಳ ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಂತಹ ಪ್ರಕರಣಗಳಲ್ಲಿ ಭಾಗಿಯಾಗುವವರ ಮೇಲೆ ಅಗತ್ಯ ವಸ್ತುಗಳ ಕಾಯ್ದೆಯಡಿ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗಿರುವುದಲ್ಲದೆ, ಇಂತಹ ಪ್ರಕರಣಗಳಲ್ಲಿ ಕರ್ತವ್ಯ ನಿರ್ಲಕ್ಷತೆಗೆ ಕಾರಣರಾದಂತಹ ಇಲಾಖಾ ಸಿಬ್ಬಂದಿ ಹಾಗೂ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿರುತ್ತದೆ.

ಇ) ಭೋಗಸ್ ಪಡಿತರ ಚೀಟಿ ಮತ್ತು ಒಂದು ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಪಡಿತರ ಚೀಟಿಗಳು ಇರುವ ಕಾರಣಗಳಿಂದಾಗಿ, ಪಡಿತರ ಪದಾರ್ಥಗಳು ಕಾಳಸಂತೆಯಲ್ಲಿ ಮಾರ್ಗ ಪಲ್ಲಟನೆಗೊಳ್ಳುತ್ತವೆ ಅದನ್ನು ತಡೆಗಟ್ಟಲು:

ಅ) ಪಡಿತರ ಚೀಟಿಗಳ ಗಣಕೀಕರಣ ಪ್ರಕ್ರಿಯೆ ನಡೆದಿರುತ್ತದೆ.

ಆ) ಪಡಿತರ ಚೀಟಿ ಹೊಂದಿರುವ ಕುಟುಂಬದ ಸದಸ್ಯರ ಭಾವ ಚಿತ್ರದ ಗಣಕೀಕರಣ ಮತ್ತು ಬೆರಳಚ್ಚುಗಳ ಬಯೋಮೆಟ್ರಿಕ್ ಪಡೆಯುವ ಪ್ರಕ್ರಿಯೆ ನಡೆದಿದೆ.

ಇ) ನ್ಯಾಯಬೆಲೆ ಅಂಗಡಿಗಳಲ್ಲಿ ಗಣಕೀರಣಗೊಳಿಸಿದ ಮಾರಾಟ ಯಂತ್ರಗಳನ್ನು ಬಳಸಿ ಬಯೋಮೆಟ್ರಿಕ್ ಮೂಲಕ ಪಡಿತರ ಪದರ್ಥಗಳನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ.

ಪಡಿತರ ಆಹಾರಧಾನ್ಯಗಳ ಮಾರ್ಗಾಂತರ ಹಾಗೂ ಕಾಳಸಂತೆಗೆ ಸಂಬಂಧಿಸಿದಂತೆ ಪತ್ತೆ ಹಚ್ಚಲಾದ ಪ್ರಕರಣದ ತಾಲ್ಲೂಕುವಾರು ವಿವರ (2009–10)

ಕ್ರಮ ಸಂ ಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ಧಾಳಿ ಮಾಡಿದ ಸಂಖ್ಯೆ	ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿದ ಪ್ರಕರಣಗಳು ಸಂಖ್ಯೆ	ಅವಶ್ಯಕ ವಸ್ತುಗಳ ಕಾಯಿದೆಯಡಿ ದಾಖಲು ಪ್ರಕರಣ ಮಾಡಿದ ಸಂಖ್ಯೆ	ಬಂದಿಸಿದವರ ಸಂಖ್ಯೆ	ಶಿಕ್ಷೆಗುರಿಯಾದವರ ಆಪಾದಿತರ ಸಂಖ್ಯೆ
1	ಬಾಗಲಕೋಟೆ	ಹುನಗುಂದ	1	1	1	1	0
		ಬದಾಮಿ	1	1	1	1	0
		ಜಮಖಂಡಿ	1	1	1	2	0
		ಬಾಗಲಕೋಟೆ	1	1	1	1	0
		ಒಟ್ಟು	4	4	4	5	0
2	ಬೆಂಗಳೂರು	ಉತ್ತರ	79	0	0	0	0

	ಅಪ	ವಲಯ					
		ಪೂರ್ವ ವಲಯ	137	0	137	0	0
		ಪಶ್ಚಿಮ ವಲಯ	191	0	191	0	0
		ದಕ್ಷಿಣ ವಲಯ	0	0	0	0	0
		ಕೇಂದ್ರ ವಲಯ	0	0	0	0	0
		ಒಟ್ಟು	407	0	328	0	0
3	ಬಿಜಾಪುರ	ಬಿಜಾಪುರ ಅಪ	37	10	27	15	0
		ಬಿಜಾಪುರ ಗ್ರಾ	0	0	0	0	0
		ಬ.ಬಾಗೇವಾಡಿ	1	1	0	5	0
		ಮುದ್ದೇಬಿಹಾಳ	16	0	16	0	0
		ಇಂಡಿ	3	2	1	3	0
		ಸಿಂಧಗಿ	0	0	0	0	0
		ಒಟ್ಟು	57	13	44	23	0
4	ಬೆಳಗಾವಿ	ಬೆಳಗಾವಿ(ನ)	30	3	33	3	0
		ಬೆಳಗಾವಿ(ಗ್ರಾ	20	0	25	0	0
		ಖಾನಾಮೂರ	3	2	4	2	0
		ಹುಕ್ಕೇರಿ	7	0	7	0	0
		ಬೈಲಹೊಂಗಲ	1	0	1	0	0
		ರಾಮದುರ್ಗ	7	0	7	0	0
		ಚಿಕ್ಕೋಡಿ	29	1	29	1	0
		ರಾಯಬಾಗ	5	2	5	2	0

		ಒಟ್ಟು	102	8	111	8	0
5	ಬಳ್ಳಾರಿ	ಬಳ್ಳಾರಿ ಪಡಿತರ	14	0	14	0	0
		ಬಳ್ಳಾರಿ ಗ್ರಾ	0	0	0	0	0
		ಹೆಚ್.ಬಿ.ಹಳ್ಳಿ	0	0	0	0	0
		ಹಡಗಲಿ	0	0	0	0	0
		ಹೊಸಪೇಟೆ	10	0	10	0	0
		ಕೂಡ್ಲಿಗಿ	0	0	0	0	0
		ಸಂಡೂರು	0	0	0	0	0
		ಸಿರುಗುಪ್ಪ	0	0	0	0	0
		ಒಟ್ಟು	24	0	24	0	0
6	ಬೀದರ್	ಔರಾದ್	6	6	6	6	0
		ಬಸವಕಲ್ಯಾಣ	1	1	1	1	0
		ಭಾಲ್ಕಿ	0	0	0	0	0
		ಬೀದರ್	7	7	7	7	0
		ಹುಮನಾಬಾದ್	5	5	5	5	0
		ಒಟ್ಟು	19	19	19	19	0
7	ಬೆಂಗಳೂರು ನಗರ	ಆನೇಕಲ್ ತಾಲ್ಲೂಕು	1	1	1	0	0
		ಉತ್ತರ	1	1	1	1	0
		ಉತ್ತರ(ಅ)	0	0	0	0	0
		ದಕ್ಷಿಣ	9	0	0	0	0
		ಪೂರ್ವ	1	1	1	1	0
		ಒಟ್ಟು	12	11	10	2	0
8	ಬೆಂಗಳೂರು ಗ್ರಾಮಾಂತರ	ನೆಲಮಂಗಲ	4	0	0	0	0
		ಹೊಸಕೋಟೆ	1	0	0	0	0

		ದೇವನಹಳ್ಳಿ	1	0	0	0	0
		ಒಟ್ಟು	6	0	0	0	0
9	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	6	6	6	0	0
		ಚಿಂತಾಮಣಿ	0	0	0	0	0
		ಶಿಡ್ಲಘಟ್ಟ	6	0	6	0	0
		ಗೌರಿಬಿದನೂರು	11	0	11	0	11
		ಬಾಗೇಪಲ್ಲಿ	6	0	6	0	0
		ಗುಡಿಬಂಡೆ	0	0	0	0	0
		ಒಟ್ಟು	29	6	29	0	11
10	ಚಾಮರಾಜನಗರ	ಗುಂಡ್ಲುಪೇಟೆ	0	0	0	0	0
		ಯಳಂದೂರು	0	0	0	0	0
		ಕೋಳ್ಳೆಗಾಲ	0	0	0	0	0
		ಚಾಮರಾಜನಗರ	0	0	0	0	0
		ಒಟ್ಟು	0	0	0	0	0
11	ಚಿಕ್ಕಮಂಗಳೂರು	ಚಿಕ್ಕಮಗಳೂರು	1	1	0	0	0
		ಚಿಕ್ಕಮಗಳೂರು	1	1	0	0	0
		ಮೂಡಿಗೆರೆ	1	0	1	0	0
		ಚಿಕ್ಕಮಗಳೂರು	1	0	1	0	0
		ಚಿಕ್ಕಮಗಳೂರು	1	0	1	0	0
		ನ.ರಾ.ಪುರ	1	1	0	0	0
		ಮೂಡಿಗೆರೆ	2	0	2	0	0
		ಒಟ್ಟು	8	3	5	0	0
12	ಚಿತ್ರದುರ್ಗ	ಚಿತ್ರದುರ್ಗ	3	0	0	0	0

		ಹಿರಿಯೂರು	2	0	0	0	0
		ಹೊಸದುರ್ಗ	1	0	0	0	0
		ಒಟ್ಟು	6	0	0	0	0
13	ದಕ್ಷಿಣ ಕನ್ನಡ	ಮಂಗಳೂರು ಅ.ಪ.	39	0	39	0	0
		ಮಂಗಳೂರು	2	0	2	0	0
		ಬಂಟ್ವಾಳ	8	0	4	0	0
		ಪುತ್ತೂರು	10	0	10	0	0
		ಬೆಳ್ತಂಗಡಿ	0	0	0	0	0
		ಸುಳ್ಯ	8	0	2	0	0
		ಒಟ್ಟು	67	0	57	0	0
14	ಧಾರವಾಡ	ಧಾರವಾಡ ಪಡಿತರ	18	2	18	12	0
		ಹುಬ್ಬಳ್ಳಿ ಪಡಿತರ	58	18	58	20	0
		ಧಾರವಾಡ ತಾಲ್ಲೂಕು	4	2	4	2	0
		ಹುಬ್ಬಳ್ಳಿ ತಾಲ್ಲೂಕು	2	2	2	6	0
		ನವಲಗುಂದ ತಾಲ್ಲೂಕು	14	0	14	0	0
		ಕಲಘಟಗಿ	1	0	1	0	0
		ಒಟ್ಟು	97	24	97	40	0
15	ಗುಲ್ಬರ್ಗ	ಆಳಂದ	5	5	0	0	0
		ಅಫಜಲಪುರ	4	4	0	0	0
		ಚಿತ್ತಾಪುರ	0	0	0	0	0
		ಗುಲ್ಬರ್ಗ	21	13	0	0	0
		ಯಾದಗಿರಿ	15	8	0	0	0
		ಸುರಪುರ	0	0	0	0	0
		ಶಹಪುರ	0	0	0	0	0
		ಚಿಂಚೋಳಿ	0	0	0	0	0

		ಸೇಡಂ	0	0	0	0	0
		ಜೇವರ್ಗಿ	0	0	0	0	0
		ಒಟ್ಟು	45	30	0	0	0
16	ಗದಗ್	ಮೋಣ	1	0	1	0	0
		ಗದಗ ಪಡಿತರ	6	0	6	0	0
		ನರಗುಂದ	3	0	3	0	0
		ಒಟ್ಟು	10	0	10	0	0
17	ಹಾಸನ	ಹಾಸನ ನಗರ	1	1	1	1	0
		ಅರಸೀಕೆರೆ	1	1	1	1	0
		ಹೊಳೆನರಸೀಪುರ	1	–	–	–	0
		ಬೇಲೂರು	1	1	1	1	–
		ಚ.ರಾ.ಪಟ್ಟಣ	1	1	1	1	0
		ಹೊಳೆನರಸೀಪುರ	1	–	–	–	0
		ಹಾಸನ ನಗರ	1	1	1	1	0
		ಚ.ರಾ.ಪಟ್ಟಣ	1	1	1	1	0
		ಅರಸೀಕೆರೆ	1	1	1	1	0
		ಅರಸೀಕೆರೆ	1	1	1	1	0
		ಹಾಸನ ನಗರ	1	0	0	0	0
		ಒಟ್ಟು	11	8	8	8	0
18	ಹಾವೇರಿ	ರಾಣೇಬೆನ್ನೂರು	4	1	1	0	0
		ಹಾನಕಲ್	1	0	1	0	0
		ಹಾವೇರಿ	0	0	0	0	0
		ಹಿರೆಕೆರೂರು	0	0	0	0	0
		ಬ್ಯಾಡಗಿ	0	0	0	0	0

		ಸವಣೂರು	0	0	0	0	0
		ಶಿಗ್ಗಾಂವ	0	0	0	0	0
		ಒಟ್ಟು	5	1	2	0	0
19	ಕೊಡಗು	ಮಡಿಕೇರಿ	4	0	0	0	0
		ಮಿರಾಜಪೇಟೆ	2	0	0	0	0
		ಸೋಮವಾರಪೇಟೆ	0	0	0	0	0
		ಒಟ್ಟು	6	0	0	0	0
20	ಕೊಪ್ಪಳ	ಕೊಪ್ಪಳ	1	0	1	0	0
		ಕುಷ್ಟಗಿ	1	0	1	0	0
		ಯಲಬುಗಾರ್	1	0	1	0	0
		ಗಂಗಾವತಿ	10	0	10	0	0
		ಒಟ್ಟು	13	0	13	0	0
21	ಕೋಲಾರ	ಕೋಲಾರ	0	0	0	0	0
		ಮಾಲೂರು	0	0	0	0	0
		ಬಂಗಾರಪೇಟೆ	0	0	0	0	0
		ಶ್ರೀನಿವಾಸಪುರ	0	0	0	0	0
		ಮುಳಬಾಗಿಲು	0	0	0	0	0
		ಒಟ್ಟು	0	0	0	0	0
22	ಮಂಡ್ಯ	ಮಂಡ್ಯನಗರ	5	5	0	5	0
		ಕೆ.ಆರ್.ಪೇಟೆ	1	0	1	2	0
		ನಾಗಮಂಗಲ	1	1	0	0	0
		ಮಳವಳ್ಳಿ	1	0	1	0	0
		ಮಂಡ್ಯ ತಾ:	1	1	0	0	0
		ಕೆ.ಆರ್.ಪೇಟೆ	1	0	1	0	0

		ಶ್ರೀರಂಗಪಟ್ಟಣ	1	0	1	0	0
		ಒಟ್ಟು	11	7	4	7	0
23	ಮೈಸೂರು	ಮೈಸೂರು ನಗರ	168	48	56	31	0
		ಮೈಸೂರು ತಾಲ್ಲೂಕು	0	0	0	0	0
		ನಂಜನಗುಡು	24	0	24	0	0
		ಟಿ.ನರಸೀಪುರ	0	0	0	0	0
		ಹುಣಸೂರು	18	0	6	0	0
		ಕೆ.ಆರ್.ನಗರ	2	0	2	0	0
		ಹೆಚ್.ಡಿ.ಕೋಟೆ	5	2	3	2	0
		ಪಿರಿಯಾಪಟ್ಟಣ	6	0	6	0	0
		ಒಟ್ಟು	223	50	97	33	0
24	ರಾಯಚೂರು	ರಾಯಚೂರು ನಗರ	20	5	15	0	0
		ರಾಯಚೂರು (ಗ್ರಾಂ)	2	2	0	0	0
		ದೇವದುರ್ಗ	1	1	0	0	0
		ಸಿಂಧನೂರು	6	0	6	0	0
		ಒಟ್ಟು	29	8	21	0	0
25	ರಾಮನಗರ	ರಾಮನಗರ	6	6	0	6	0
		ಚನ್ನಪಟ್ಟಣ	2	2	0	2	0
		ಮಾಗಡಿ	0	0	0	0	0
		ಕನಕಪುರ	2	0	2	0	0
		ಒಟ್ಟು	10	8	2	8	0
26	ಶಿವಮೊಗ್ಗ	ಶಿವಮೊಗ್ಗ ಪಡಿತರ	3	1	3	1	1

		ಭದ್ರಾವತಿ ಪಡಿತರ	0	0	0	0	0
		ಶಿವಮೊಗ್ಗ	0	0	0	0	0
		ಭದ್ರವತಿ	1	1	1	0	0
		ಶಿಕಾರಿಪುರ	0	0	0	0	0
		ಸಾಗರ	1	0	1	0	0
		ಸೊರಬ	1	0	1	0	0
		ತೀರ್ಥಹಳ್ಳಿ	1	1	1	0	0
		ಹೊಸನಗರ	2	1	2	0	0
		ಒಟ್ಟು	9	4	9	1	1
27	ತುಮಕೂರು	ತುಮಕೂರು ಅಪ	39	38	1	17	0
		ತುಮಕೂರು ತಾ	1	0	1	1	0
		ಕುಣಿಗಲ್	1	1	1	1	0
		ಗುಬ್ಬಿ	3	1	2	2	0
		ಘಪಟೂರು	5	4	1	4	0
		ತುರುವೇಕೆರೆ	2	1	1	1	0
		ಚಿಕ್ಕನಾಯಕನಹಳ್ಳಿ	7	2	5	2	0
		ಮಧಗಿರಿ	2	1	1	1	0
		ಕೊರಟಗೆರೆ	1	1	0	2	0
		ಶಿರಾ	5	1	4	2	0
		ಪಾವಗಡ	4	2	2	3	0
		ಒಟ್ಟು	70	52	19	36	0
28	ಉಡುಪಿ	ಕಾರ್ಕಾಳ	8	0	8	0	0
		ಕುಂದಾಪುರ	33	0	33	0	0
		ಉಡುಪಿ	24	0	24	0	0
		ಒಟ್ಟು	65	0	65	0	0
29	ಉತ್ತರ ಕನ್ನಡ	ಉತ್ತರ ಕನ್ನಡ	0	0	0	0	0
		ಅಂಕೋಲಾ	0	0	0	0	0

		ಕುಮಟಾ	0	0	0	0	0
		ಹೊನ್ನಾವರ	0	0	0	0	0
		ಭಟ್ಕಳ	0	0	0	0	0
		ಸಿರಸಿ	0	0	0	0	0
		ಸಿದ್ದಾಪುರ	0	0	0	0	0
		ಯಲ್ಲಾಪುರ	0	0	0	0	0
		ಮುಂಡಗೋಡ	0	0	0	0	0
		ಹಳಿಯಾಳ	0	0	0	0	0
		ಜೋಯಿಡಾ	0	0	0	0	0
		ಒಟ್ಟು	0	0	0	0	0
		ಒಟ್ಟು	1345	256	978	190	12

ಪಡಿತರ ಆಹಾರಧಾನ್ಯಗಳ ಮಾರ್ಗಾಂತರ ಹಾಗೂ ಕಾಳಸಂತೆಗೆ ಸಂಬಂದಿಸಿದಂತೆ ಪತ್ತೆ ಹಚ್ಚಲಾದ ಪ್ರಕರಣದ ತಾಲ್ಲೂಕುವಾರು ವಿವರ (2010–11)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ಧಾಳಿ ಮಾಡಿದ ಸಂಖ್ಯೆ	ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿದ ಪ್ರಕರಣಗಳ ಸಂಖ್ಯೆ	ಅವಶ್ಯಕ ವಸ್ತುಗಳ ಕಾಯಿದೆಯಡಿ ದಾಖಲು ಪ್ರಕರಣ ಮಾಡಿದ ಸಂಖ್ಯೆ	ಬಂದಿಸಿದವರ ಸಂಖ್ಯೆ	ಶಿಕ್ಷೆಗುರಿಯಾದವರ ಆಪಾದಿತರ ಸಂಖ್ಯೆ
1	ಬಾಗಲ ಕೋಟೆ	ಬಾಗಲಕೋಟೆ	0	0	1	0	0
		ಬಾದಾಮಿ	1	1	1	1	0
		ಬಾದಾಮಿ	1	1	1	0	0
		ಒಟ್ಟು	2	2	3	1	0
2	ಬೆಂಗಳೂರು ಅಪ	ಉತ್ತರ ವಲಯ	20	0	0	0	0
		ಪೂರ್ವ ವಲಯ	31	0	0	0	0
		ಪಶ್ಚಿಮ ವಲಯ	25	0	25	0	0
		ದಕ್ಷಿಣ ವಲಯ	0	0	0	0	0
		ಕೇಂದ್ರ ವಲಯ	0	0	0	0	0
		ಒಟ್ಟು	76	0	25	0	0
3	ಬಿಜಾಪುರ	ಬಿಜಾಪುರ ಅಪ	8	4	4	1	0
		ಬಿಜಾಪುರ ಗ್ರಾ	1	1	0	1	0
		ಬ.ಬಾಗೇವಾಡಿ	0	0	0	0	0

		ಮುದ್ದೇಬಿಹಾಳ	0	0	0	0	0
		ಇಂಡಿ	0	0	0	0	0
		ಸಿಂಧಗಿ	0	0	0	0	0
		ಒಟ್ಟು	9	5	4	2	0
4	ಬೆಳಗಾವಿ	ಬೆಳಗಾವಿ(ನ)	10	0	16	0	0
		ಬೆಳಗಾವಿ(ಗ್ರಾ	4	0	4	0	0
		ಹುಕ್ಕೇರಿ	2	0	2	0	0
		ಬೈಲಹೊಂಗಲ	13	0	13	0	0
		ಸವದತ್ತಿ	16	0	16	0	0
		ರಾಮದುರ್ಗ	2	0	2	0	0
		ಚಿಕ್ಕೋಡಿ	15	0	15	0	0
		ರಾಯಬಾಗ	9	0	9	0	0
		ಒಟ್ಟು	79	0	77	0	0
5	ಬಳ್ಳಾರಿ	ಬಳ್ಳಾರಿ ಪಡಿತರ	0	0	0	0	0
		ಬಳ್ಳಾರಿ ಗ್ರಾ	0	0	0	0	0
		ಹೆಚ್.ಬಿ.ಹಳ್ಳಿ	0	0	0	0	0
		ಹಡಗಲಿ	0	0	0	0	0
		ಹೊಸಪೇಟೆ	0	0	0	0	0
		ಕೂಡ್ಲಿಗಿ	0	0	0	0	0
		ಸಂಡೂರು	0	0	0	0	0
		ಸಿರುಗುಪ್ಪ	0	0	0	0	0
		ಒಟ್ಟು	0	0	0	0	0
6	ಬೀದರ್	ಔರಾದ್	1	1	1	1	0
		ಬಸವಕಲ್ಯಾಣ	0	0	0	0	0
		ಭಾಲ್ಕಿ	0	0	0	0	0
		ಬೀದರ್	0	0	0	0	0
		ಹುಮನಾಬಾದ್	0	0	0	0	0
		ಒಟ್ಟು	1	1	1	1	0
7	ಬೆಂಗಳೂರು ನಗರ	ಆನೇಕಲ್ ತಾಲ್ಲೂಕು	0	0	0	0	0
		ಉತ್ತರ	4	4	4	4	0
		ಉತ್ತರ(ಅ)	0	0	0	0	0
		ದಕ್ಷಿಣ	0	0	0	0	0
		ಪೂರ್ವ	0	0	0	0	0
		ಒಟ್ಟು	4	4	4	4	0
8	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	1	0	0	0	0
		ಹೊಸಕೋಟೆ	1	0	0	0	0

		ಒಟ್ಟು	2	0	0	0	0
9	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	1	1	1	4	0
		ಚಿಂತಾಮಣಿ	32	0	32	0	0
		ಶಿಡ್ಲಘಟ್ಟ	0	0	0	0	0
		ಗೌರಿಬಿದನೂರು	2	0	2	0	0
		ಬಾಗೇಪಲ್ಲಿ	6	0	6	0	0
		ಗುಡಿಬಂಡೆ	0	0	0	0	0
		ಒಟ್ಟು	41	1	41	4	0
10	ಚಾಮರಾಜನಗರ	ಗುಂಡ್ಲುಪೇಟೆ	0	0	0	0	0
		ಯಳಂದೂ ರು	0	0	0	0	0
		ಕೋಳ್ಳೆಗಾಲ	0	0	0	0	0
		ಚಾಮರಾಜನಗರ	0	0	0	0	0
		ಒಟ್ಟು	0	0	0	0	0
11	ಚಿಕ್ಕಮಗಳೂರು	ಚಿಕ್ಕಮಗಳೂರು	15	0	6	0	0
		ಚಿಕ್ಕಮಗಳೂರು	0	0	0	0	0
		ಮೂಡಿಗೆರೆ	0	0	0	0	0
		ಚಿಕ್ಕಮಗಳೂರು	0	0	0	0	0
		ಚಿಕ್ಕಮಗಳೂರು	0	0	0	0	0
		ನ.ರಾ.ಪುರ	0	0	0	0	0
		ಮೂಡಿಗೆರೆ	0	0	0	0	0
		ಒಟ್ಟು	15	0	6	0	0
12	ಧಾರವಾಡ	ಧಾರವಾಡ ಪಡಿತರ	1	1	1	2	0
		ಹುಬ್ಬಳ್ಳಿ ಪಡಿತರ	5	1	4	3	0
		ಧಾರವಾಡ ತಾಲ್ಲುಕೂ	1	0	1	0	0
		ಒಟ್ಟು	7	2	6	5	0
13	ದಕ್ಷಿಣ ಕನ್ನಡ	ಮಂಗಳೂರು ಅ.ಪ.	4	0	0	0	0
		ಮಂಗಳೂರು	1	0	1	0	0
		ಬಂಟ್ವಾಳ	0	0	0	0	0
		ಪುತ್ತೂರು	0	0	0	0	0
		ಬೆಳ್ತಂಗಡಿ	0	0	0	0	0
		ಸುಳ್ಯ	2	0	0	0	0
		ಒಟ್ಟು	7	0	1	0	0
14	ಗದಗ್	ರೋಣ	0	0	0	0	0
		ಗದಗ್ ಪಡಿತರ	11	0	11	0	0

		ನರಗುಂದ	0	0	0	0	0
		ಒಟ್ಟು	11	0	11	0	0
15	ಗುಲ್ಬರ್ಗ	ಆಳಂದ	0	0	0	0	0
		ಅಫಜಲಪುರ	1	1	0	0	0
		ಚಿತ್ತಾಪುರ	1	1	0	0	0
		ಗುಲ್ಬರ್ಗ	1	1	0	0	0
		ಯಾದಗಿರಿ	0	0	0	0	0
		ಸುರಪುರ	1	1	0	0	0
		ಶಹಪುರ	0	0	0	0	0
		ಚಿಂಚೋಳಿ	0	0	0	0	0
		ಸೇಡಂ	0	0	0	0	0
		ಜೇವರ್ಗಿ	0	0	0	0	0
		ಒಟ್ಟು	4	4	0	0	0
16	ಹಾಸನ	ಹಾಸನ ನಗರ	1	1	1	1	0
		ಬೇಲೂರು	1	–	–	–	0
		ಅರಕಲಗೂ ಡು	1	–	–	–	0
		ಹಾಸನ ನಗರ	3	3	3	3	0
		ಸಕಲೇಶಪುರ	1	0	0	0	0
		ಹಾಸನ ನಗರ	2	0	0	0	0
		ಸಕಲೇಶಪುರ	2	0	0	0	0
		ಹಾಸನ ನಗರ	1	1	1	1	0
		ಚ.ರಾ.ಪಟ್ಟಣ	1	0	0	0	0
		ಸಕಲೇಶಪುರ	1	0	0	0	0
		ಹಾಸನನಗರ	1	0	0	0	0
		ಹಾಸನನಗರ	1	0	0	0	0
		ಒಟ್ಟು	16	5	5	5	0
17	ಹಾವೇರಿ	ರಾಣೇಬೆನ್ನೂರು	8	0	0	0	0
		ಹಾನಗಲ್	0	0	1	0	0
		ಹಾವೇರಿ	31	0	0	0	0
		ಹಿರೇಕೆರೂರು	19	0	0	0	0
		ಬ್ಯಾಡಗಿ	0	0	0	0	0
		ಸವಣೂರು	0	0	0	0	0
		ಶಿಗ್ಗಾಂವ	0	0	0	0	0
		ಒಟ್ಟು	58	0	1	0	0
18	ಕೊಡಗು	ಮಡಿಕೇರಿ	1	0	0	0	0
		ವಿರಾಜಪೇಟೆ	0	0	0	0	0
		ಸೋಮವಾರಪೇಟೆ	0	0	0	0	0
		ಒಟ್ಟು	1	0	0	0	0

19	ಕೊಪ್ಪಳ	ಕೊಪ್ಪಳ	1	0	0	0	0
		ಕುಷ್ಟಗಿ	0	0	0	0	0
		ಯಲಬುರ್ಗಾ	0	0	0	0	0
		ಗಂಗಾವತಿ	10	0	0	0	0
		ಒಟ್ಟು	11	0	0	0	0
20	ಕೋಲಾರ	ಕೋಲಾರ	0	0	0	0	0
		ಮಾಲೂರು	0	0	0	0	0
		ಬಂಗಾರಪೇಟೆ	0	0	0	0	0
		ಶ್ರೀನಿವಾಸಪುರ	0	0	0	0	0
		ಮುಳಬಾಗಿ ಲು	0	0	0	0	0
		ಒಟ್ಟು	0	0	0	0	0
21	ಮಂಡ್ಯ	ಮಂಡ್ಯನಗರ	5	5	0	5	0
		ಕೆ.ಆರ್.ಪೇಟೆ	0	0	0	0	0
		ನಾಗಮಂಗಲ	0	0	0	0	0
		ಮಳವಳ್ಳಿ	0	0	0	0	0
		ಮಂಡ್ಯ ತಾ:	0	0	0	0	0
		ಕೆ.ಆರ್.ಪೇಟೆ	0	0	0	0	0
		ಶ್ರೀರಂಗಪಟ್ಟಣ	0	0	0	0	0
		ಒಟ್ಟು	5	5	0	5	0
22	ಮೈಸೂರು	ಮೈಸೂರು ನಗರ	15	14	15	9	0
		ಮೈಸೂರು ತಾಲ್ಲೂಕು	0	0	0	0	0
		ನಂಜನಗುಡು	11	0	11	0	0
		ಟಿ.ನರಸೀಪುರ	1	0	1	0	0
		ಹುಣಸೂರು	0	0	0	0	0
		ಕೆ.ಆರ್.ನಗರ	0	0	0	0	0
		ಹೆಚ್.ಡಿ.ಕೋಟೆ	0	0	0	0	0
		ಪಿರಿಯಾ ಪಟ್ಟಣ	1	0	1	0	0
		ಒಟ್ಟು	28	14	28	9	0
23	ರಾಯಚೂರು	ರಾಯಚೂರು ನಗರ	0	0	0	0	0
		ರಾಯಚೂರು (ಗ್ರಾಂ)	0	0	0	0	0
		ದೇವದುರ್ಗ	0	0	0	0	0
		ಸಿಂಧನೂರು	3	2	1	0	0
		ಒಟ್ಟು	3	2	1	0	0
24	ರಾಮನಗರ	ರಾಮನಗರ	0	0	0	0	0

		ಚನ್ನಪಟ್ಟಣ	0	0	0	0	0
		ಮಾಗಡಿ	0	0	0	0	0
		ಕನಕಪುರ	0	0	0	0	0
		ಒಟ್ಟು	0	0	0	0	0
25	ಶಿವಮೊಗ್ಗ	ಶಿವಮೊಗ್ಗ ಪಡಿತರ	0	0	0	0	0
		ಭದ್ರಾವತಿ ಪಡಿತರ	0	0	0	0	0
		ಶಿವಮೊಗ್ಗ	0	0	0	0	0
		ಭದ್ರಾವತಿ	0	0	0	0	0
		ಶಿಕಾರಿಪುರ	0	0	0	0	0
		ಸಾಗರ	0	0	0	0	0
		ಸೊರಬ	0	0	0	0	0
		ತೀರ್ಥಹಳ್ಳಿ	0	0	0	0	0
		ಹೊಸನಗರ	0	0	0	0	0
		ಒಟ್ಟು	0	0	0	0	0
26	ತುಮಕೂರು	ತುಮಕೂರು ಅಪ	2	2	0	2	0
		ತುಮಕೂರು ತಾ	0	0	0	0	0
		ಕುಣಿಗಲ್	1	1	0	3	0
		ಗುಬ್ಬಿ	0	0	0	0	0
		ತಿಪಟೂರು	0	0	0	0	0
		ತುರುವೇಕೆರೆ	1	1	0	2	0
		ಚಿಕ್ಕನಾಯಕನಹಳ್ಳಿ	0	0	0	0	0
		ಮಧುಗಿರಿ	0	0	0	0	0
		ಕೊರಟಗೆರೆ	0	0	0	0	0
		ಶಿರಾ	0	0	0	0	0
		ಪಾವಗಡ	0	0	0	0	0
		ಒಟ್ಟು	4	4	0	7	0
27	ಉಡುಪಿ	ಕಾರ್ಕಳ	0	0	0	0	0
		ಕುಂದಾಪುರ	0	0	0	0	0
		ಉಡುಪಿ	1	0	1	0	0
		ಒಟ್ಟು	1	0	1	0	0
28	ಉತ್ತರ ಕನ್ನಡ	ಉತ್ತರ ಕನ್ನಡ	0	0	0	0	0
		ಅಂಕೋಲಾ	0	0	0	0	0
		ಕುಮಟಾ	0	0	0	0	0
		ಹೊನ್ನಾವರ	0	0	0	0	0
		ಭಟ್ಕಳ	0	0	0	0	0

		ಸಿರಸಿ	0	0	0	0	0
		ಸಿದ್ದಾಪುರ	0	0	0	0	0
		ಯಲ್ಲಾಪುರ	0	0	0	0	0
		ಮುಂಡಗುಡ	0	0	0	0	0
		ಹಳಿಯಾಳ	0	0	0	0	0
		ಜೋಯಿಡಾ	0	0	0	0	0
		ಒಟ್ಟು	0	0	0	0	0
		ಒಟ್ಟು	370	49	209	43	0

ಶ್ರೀ ಸುಭಾಷ್ ಆರ್ ಗುತ್ತೇದಾರ್: ಸನ್ಮಾನ್ಯ ಸಭಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಇಲ್ಲಿ ನಾನು ಕೇಳಬಯಸುವುದು ಏನೆಂದರೆ ಕಳ್ಳಸಂತೆಯಲ್ಲಿ ಮಾರುತ್ತಿದ್ದ ಸುಮಾರು 5 ಪ್ರಕರಣಗಳು ಪತ್ತೆ ಆಗಿ ದಾಖಲಾಗಿವೆ ಎಂದು ಉತ್ತರ ಕೊಟ್ಟಿದ್ದರೆ. ಅದರೆ ಮುಂದೆ ಇಂತಹ ಪ್ರಕರಣಗಳಿಗೆ ಏನು ಶಿಕ್ಷೆ ಕೊಡುತ್ತಾರೆಂಬುದನ್ನು ಹೇಳಿಲ್ಲ. ಅವರು ಕೇಸ್ ಮಾಡಿದ ಬಳಿಕ ಬೇರೆಯವರಿಗೆ ಅಟ್ಯಾಚ್ ಮಾಡಿಕೊಡುತ್ತಾರೆ. ಅದೇ ನ್ಯಾಯ ಬೆಲೆ ಅಂಗಡಿಗೆ consult ಇರುತ್ತದೆ, ಅವರವರಿಗೆ ಅಟ್ಯಾಚ್ ಮಾಡಿಕೊಡುವುದರಿಂದ ಅವರಿಗೆ ಮಾರುವುದಕ್ಕೆ ಕೊಡುತ್ತಾರೆ, ಜಿಲ್ಲೆಗಳಿಗೆ ಬಂದು ಡಿಸಿಯವರ ಬಳಿ ಸ್ಟೇ ತೆಗೆದುಕೊಳ್ಳುತ್ತಾರೆ. ಮತ್ತೆ ಅವರೇ ಹಂಚುತ್ತಾರೆ. ಮಂತ್ರಿಗಳ ಬಳಿ ಸ್ಟೇ ತೆಗೆದುಕೊಳ್ಳತ್ತಾರೆ. ಮೂರು ನಾಲ್ಕು ವರ್ಷಗಳಾದರೂ ಕೂಡ ಅವರೇ ಹಂಚುತ್ತಿರುತ್ತಾರೆ, ಮತ್ತೆ ಮುಂದೆ ಅವರ ತಪ್ಪೇನೂ ಇಲ್ಲವೆಂದು ಹೇಳಿ ಅವರಿಗೆ ನ್ಯಾಯ ಬೆಲೆ ಅಂಗಡಿ ಕೊಡುತ್ತಾರೆ. ನನ್ನ ತಾಲ್ಲೂಕಿನಲ್ಲಿ ಈ ತರಹ ಐದು ಪ್ರಕರಣಗಳು ಆಗಿವೆ ಅದರೂ ಕೂಡ ಇವತ್ತಿನವರೆಗೂ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಪಡಿತರ ಚೀಟಿಯಿಂದ ಏನು ನ್ಯಾಯ ಬೆಲೆ ಅಂಗಡಿಯವರು ಮಾರಾಟ ಮಾಡುತ್ತಾರೆ ಅದೂ ಕೂಡ ಇವತ್ತು ಕೇಸ್ ಆಗುತ್ತಿಲ್ಲ. ಮಂತ್ರಿಗಳ ಕಛೇರಿಯಿಂದ ಸ್ಟೇ ಕೊಡುತ್ತಾರೆ, ಡಿಸಿ ಕಛೇರಿಯಿಂದ ಸ್ಟೇ ಕೊಡುತ್ತಾರೆ, 4–5 ವರ್ಷಗಳು ಕಳೆದರೂ ಇದೇ ತರಹ ಮಾಡಿದರೆ ಅಲ್ಲಿಯ ಜನರಿಗೆ ಯಾವ ರೀತಿ ನ್ಯಾಯ ಸಿಗುತ್ತೆ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಕೂಡ ಸ್ಟೇ ಕೊಡತಕ್ಕಂತಹ ವ್ಯವಸ್ಥೆ ಇದೆ. ಕಮಿಷನರ್ ಕೋರ್ಟಿನಲ್ಲಿ ಸ್ಟೇ ಕೊಡತಕ್ಕಂತಹ ವ್ಯವಸ್ಥೆ ಇದೆ, ಸರ್ಕಾರದ ಮಟ್ಟದಲ್ಲಿಯೂ ಸ್ಟೇ ಕೊಡುವ ವ್ಯವಸ್ಥೆ ಇದೆ. ಯಾವ ಯಾವ ಪ್ರಕರಣಗಳಲ್ಲಿ ಅವರಿಗೆ ನ್ಯಾಯ ಸಿಕ್ಕಿಲ್ಲ, ಅನ್ಯಾಯವಾಗಿದೆ, ಅನ್ಯಾಯವಾಗಿ ನಮಗೆ ರೈಡ್ ಮಾಡಿ ಕೇಸ್ ಮಾಡಿದ್ದಾರೆ ಅಂದಾಗ ಅದನ್ನು ಕೂಲಂಕಷವಾಗಿ ಪರಿಶೀಲನೆ ಆಗುವವರೆಗೆ ಸ್ಟೇ ಕೊಡಬೇಕಾದ ವ್ಯವಸ್ಥೆ ಇದೆ, ಕೊಡುತ್ತಿರುತ್ತಾರೆ. ಎಲ್ಲಾ ಪ್ರಕರಣಗಳಲ್ಲಿ ಸ್ಟೇ ಕೊಡುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಕೊಟ್ಟಿರಬಹುದು. ಎಲ್ಲಾ ಪ್ರಕರಣಗಳಲ್ಲಿ ಸ್ಟೇ ಕೋಡುವುದಕ್ಕೆ ಸಾಧ್ಯವಿಲ್ಲ. ಕೆಲವು ಪ್ರಕರಣಗಳಲ್ಲಿ ಸ್ಟೇ ಕೊಟ್ಟರಬಹುದು. ಆದರೆ ಅಂತಹ ಪ್ರಕರಣಗಳನ್ನು ಆದಷ್ಟು ಬೇಗನೆ ನಾವು ಇತ್ಯರ್ಥ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಇದು ಒಂದು. ಅವರು ಹೇಳುವುದು ಮತ್ತೆ ಪುನ: ಅವರಿಗೇ ಕೊಟ್ಟಿದ್ದಾರೆ ಎಂದು ಹೇಳಿದರು, ಅಂಹವರಿಗೆ ಕೊಟ್ಟಿದ್ದರೆ ಬೇರೆ ವ್ಯವಸ್ಥೆ ಮಾಡುವುದಕ್ಕೆ ನಾನು ಹೇಳುತ್ತೇನೆ. ಪ್ರಕರಣಗಳು ಗಂಭೀರವಾಗಿದ್ದರೆ, ಅಂತಹ ಬೇರೆ ವ್ಯವಸ್ಥೆ ಮಾಡುವುದಕ್ಕೆ ನಾನು ಹೇಳುತ್ತೇನೆ. ಪ್ರಕರಣಗಳು ಗಂಭೀರವಾಗಿದ್ದರೆ, ಅಂತಹ ಆರೋಪಗಳು ಸತ್ಯವಾಗಿದ್ದರೆ ಬದಲಾಯಿಸುವುದಕ್ಕೆ ನಾನು ಹೇಳುತ್ತೆನೆ.

ಶ್ರೀ ಸುಭಾಷ್ ಆರ್ ಗುತ್ತೇದಾರ್: ನಿಮ್ಮ ರೆಕರ್ಡ್‌ನಲ್ಲಿ ಅಟ್ಯಾಚ್‌ಮೆಂಟ್ ಬೇರೆಯವರಿಗೆ ಕೊಟ್ಟಿರುತ್ತಾರೆ. ಅದರೆ ಹಂಚುವವರು ಅವರೇ ಅವರವರೇ ಇರುತ್ತಾರೆ ಅಲ್ಲಿ.

ಶ್ರೀ ಗೋವಿಂದ ಎಂ ಕಾರಜೋಳ: ಸಾರ್ವಜನಿಕರ ಸಹಕಾರ ಬೇಕೆಂದು ನಾನು ಮೊದಲನೇ ಪ್ರಶ್ನೆಗೆ ಉತ್ತರ ಹೇಳುವಾಗಲೇ ಹೇಳಿದೆ. ನಾವು ಬೇರೆಯವರಿಗೆ ಅಟ್ಯಾಚ್ ಮಾಡಿದಾಗ ಅವರ ಮುಖಾಂತರ ಅವರೇ ಹಂಚುತ್ತಾರೆಂದು ಇವರು ಆರೋಪ ಮಾಡಿದರೆ ಅದು ನಮ್ಮಲ್ಲಿ ದಾಖಲೆಯಲ್ಲಿರುವುದಿಲ್ಲ.

ಅಧ್ಯಕ್ಷರು: ಕೋರ್ಟಿನಲ್ಲಿ ಸ್ಟೇ ಕೊಟ್ಟರೆ ಅದು ಕಾನೂನು ಪ್ರಕಾರ ಮಾಡಿರುತ್ತಾರೆ. ಅದನ್ನೂ ಪ್ರಶ್ನೆ ಮಾಡಿದರೆ ಹೇಗೆ? ಜಿಲ್ಲಾದಿಕಾರಿಗಳು ಕ್ವಾಸಿ ಜುಡಿಷಿಯಲ್ ಇರುತ್ತಾರೆ.

ಶ್ರೀ ಸುಭಾಷ್ ಆರ್ ಗುತ್ತೇದಾರ್: ಮಂತ್ರಿಗಳೇ ಡಿಫೆಂಡ್ ಮಾಡಿಕೊಂಡರೆ ಹೇಗೆ?

ಅಧ್ಯಕ್ಷರು: ಕಾನೂನಿನಲ್ಲಿ ಇರುವುದನ್ನು ಹೇಳಿದ್ದಾರೆ. ಕ್ವಾಸಿ ಜ್ಯುಡಿಷಿಯಲ್ ಅದಕ್ಕೆ Essestial Commodities Act ಇದೆ. ಅದರ ಪ್ರಕಾರ ಮಾಡಿದ್ದಾರೆ.

ಶ್ರೀ ಸುಭಾಷ್ ಆರ್ ಗುತ್ತೇದಾರ್: ಕೇಸ್ ಆಗಿರುವುದು ನಿಜ ಅಲ್ಲವಾ, ಇವರು ಏಕೆ ಕ್ರಮ ತೆಗೆದುಕೊಂಡಿಲ್ಲ?

ಹಳದಿ ಕಾರ್ಡ್ ವಿತರಣೆಯ ಬಗ್ಗೆ

52(378) ಶ್ರೀ ಕೆ ಜೆ ಜಾಜ್:(ಸರ್ವಜ್ಞನಗರ) ವಿಧಾನಸಭಾ ಸದಸ್ಯರು ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡುಬಡವರಿಗೆ ಹಳದಿ ಕಾರ್ಡ್ ವಿತರಣೆ ಮಾಡುವುದು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಅರ್ಜಿಗಳು ಬಾಕಿ ಉಳಿದಿದೆ ಮತ್ತು ತಡೆಹಿಡಿಯಲು ಕಾರಣವೇನು; ವಿವರ ನೀಡುವುದು;

ಆ) ಬಿ.ಬಿ.ಎಂ.ಪಿ. ವ್ಯಾಪ್ತಿಯ ಎಷ್ಟು ಪಡಿತರ ಅಂಗಡಿಗಳಿವೆ; ಬಿ.ಬಿ.ಎಂ.ಪಿ. ವ್ಯಾಪ್ತಿ ವಿಸ್ತೀರ್ಣ ವಾಗಿರುವುದರಿಂದ ಪಡಿತರ ಮಳಿಗೆಗಳು ಹೆಚ್ಚಿಗೆ ಪ್ರಾರಂಭಿಸಲು ಸರ್ಕಾರ ಯೋಜನೆಯನ್ನು ರೂಪಿಸಿದಯೇ?

ಶ್ರೀ ಆರ್ ಅಶೋಕ್(ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ತಡೆಹಿಡಿದಿರುವುದಿಲ್ಲ ಅದರೆ 13902 ಪಡಿತರ ಚೀಟಿದಾರರು ತಮ್ಮ ಬಿಪಿಎಲ್ ಪಡಿತರ ಚೀಟಿಗಳನ್ನು ಪಡಿದುಕೊಂಡಿರುವುದಿಲ್ಲ. ಬಿಬಿಎಂಪಿ ವ್ಯಾಪ್ರಿಯಲ್ಲಿ ಒಟ್ಟು 11102 ಅರ್ಜಿಗಳು ಬಾಕಿ ಉಳಿದಿವೆ. ಅರ್ಜಿಯನ್ನು ಸಲ್ಲಿಸಿದಾಗ ನೀಡಿದ್ದಂತಹ ವಿಳಾಸದಲ್ಲಿ ವಾಸವಿಲ್ಲದೇ ಇರುವುದು, ಅಥವಾ ನೀಡಿರುವಂತಹ ವಿಳಾಸ ಸ್ಪಷ್ಟವಿಲ್ಲದಿರುವುದು ಅಥವಾ ತಾತ್ಕಾಲಿಕ ಪಡಿತರ ಚೀಟಿ ಸಿದ್ದಪಡಿಸಿ ಒಂದು ವರ್ಷ ಕಳೆದರೂ ಪಡೆದುಕೊಳ್ಳಲು ಬಾರದೇ ಇರುವುದು ಹಾಗೂ ಹಂಚಿಕೆಯಾಗಿರುವ ಎಪಿಎಲ್ ಪಡಿತರ ಚೀಟಿಯನ್ನು